Land Revenue Assessment

*Q.—70. Sri C. R. RANGE GOWDA (Magadi).—

Will the Minister for Revenue and Forests be pleased to state :—

(*a*) the Land Revenue Assessment fixed for the different kinds in different regions in the State ;

(*b*) whether Government have constituted a Committee to look into the abolition of Land Revenue Assessment in the State ;

(*c*) whether the Committee has submitted its report ;

(*d*) if so, whether they would place the same on the Table of the House ?

A.—Sri G. B. SHANKARA RAO (Deputy Minister for Revenue).—

(*a*) *Vide* Statement placed on the Table of the House. **

(*b*) A Cabinet Sub-Committee has been entrusted to suggest the feasibility or otherwise of changing the present system of Land Revenue.

(*c*) No.

(*d*) In view of (*c*) does not arise.

ಶ್ರೀ ಸಿ. ಆರ್. ರಂಗೇಗೌಡ.—ಸ್ವಾಮಿ, ಸ್ಟೇಟ್‌ಮೆಂಟ್ ಪುಟ 3ರಲ್ಲಿ ಕಾಲಂ 6, ಐಟಮು ನಂ. 8ರಲ್ಲಿ ಗಾರ್ಡನಿಗೆ 19—20, 11—26, ಮತ್ತು 15—12 ಎಂದು ಫಸ್ಟ್ ಕ್ಲಾಸಿಗೆ ಇದೆ. ಹಾಗೆ ಸೆಕೆಂಡ್ ಕ್ಲಾಸಿಗೆ 22.0 ಎಂದು ಇದೆ. ಹೀಗೆ ಹಾಕಿರುವುದರಿಂದ ತೊಂದರೆ ಯಾಗುವುದಿಲ್ಲವೇ ?

†Sri G.B. SHANKARA RAO.—These rates have been fixed according to the provisions of the Land Revenue Act. We are not to make any changes when once they have been fixed according to the provisions of the Act.

ಶ್ರೀ ಸಿ. ಆರ್. ರಂಗೇಗೌಡ.—ಆಕ್ಟ್ ಪ್ರಕಾರ ತಿದ್ದುಪಡಿ ಮಾಡಿದ್ದಾರೆ, ಚೇಂಜ್ ಮಾಡುವು ದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ಡಿವಿಜನ್ ಸೆಟ್ಲ್‌ಮೆಂಟ್ ಮಾಡುವಾಗ ಒಂದು ಬಾಳೆಗಿಡ ತೋಟವನ್ನೂ ಒಂದು ದೊಡ್ಡ ತೋಟವನ್ನಾಗಿ ಮಾಡಿದ್ದಾರೆ. ನೀರಿಲ್ಲದೆ ಇದ್ದರೂ ಗದ್ದೆಯೆಂದು ಮಾಡಿದ್ದಾರೆ. ಉದಾಹರಣೆಗೆ ಮಾಗಡಿ ಟೌನಿನ ಪಕ್ಕದಲ್ಲಿ ಒಂದು ಕೆರೆಯ ಹಿಂಭಾಗದಲ್ಲಿ ಜೌಗು ಭೂಮಿ ಇದೆ, ತರಿ ಭೂಮಿ ಇದೆ, ಕೆರೆಗೆ ತೂಬು ಕೂಡ ಇಲ್ಲ. ಇಂತಹ ಕ್ಲಾಸಿಫಿಕೇಶನ್ಸ್ ಯಾವ ಕಾನೂನು ಮೇರೆ ಮಾಡಿದ್ದಾರೆ, ಸ್ವಾಮಿ ?

Sri G. B. SHANKARA RAO.—It is according to the provisions of the Land Revenue Act.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಈಗ ಕ್ಯಾಬಿನೆಟ್ ಒಂದು ತೀರ್ಮಾನವನ್ನು ತೆಗೆದು ಕೊಂಡು ನೀರಿನ ರೇಟನ್ನು ಅರ್ಧಕ್ಕೆ ಇಳಿಸಿದ್ದಾರೆ ಎಂದು ಪತ್ರಿಕೆಗಳಲ್ಲಿ ಎಲ್ಲಾ ಬಂದಿತ್ತು. ಇದು ನಿಜವೇ ? ಹಾಗಿದ್ದರೆ ಎಷ್ಟು ಮಟ್ಟಿಗೆ ಇಳಿಸಿದ್ದಾರೆ ಎಂಬುದನ್ನು ತಿಳಿಸಬೇಕು.

† ಶ್ರೀ ಬಿ. ರಾಚಯ್ಯ (ಕಂದಾಯ ಮತ್ತು ಅರಣ್ಯ ಶಾಖೆಗಳ ಮಂತ್ರಿಯವರು).—ತೀರ್ಮಾನ ತೆಗೆದುಕೊಂಡಿದ್ದಾರೆ. ಈಗ ಎಲ್ಲರ ಅವಗಾಹನೆಗೆ ನೋಟಿಫಿಕೇಶನ್ ಮಾಡಿ, 29ನೇ ತಾರೀಖಿನೊಳಗೆ ಆಬ್ಜೆಕ್ಷನ್ಸ್ ಕೇಳಿ ಸರ್ಕಾರ ಒಂದು ಕೊನೆಯ ನಿರ್ಧಾರವನ್ನು ತೆಗೆದುಕೊಳ್ಳುತ್ತದೆ.

** Copy placed in the Mysore Legislature Library. *Vide* Number 8 dated 26th June 1967.

†Indicates that the speeches or remarks have not been revised by the member concerned.

Sri C. K. RAJIAH SHETTY.—In answer to (c), you have stated 'No'. May I know whether any terms of reference were made to the Sub-Committee, that has been constituted, to consider this Land Revenue abolition question ?

Sri B. RACHAIAH.—The terms of reference are : whether the present levy of land revenue can be abolished, whether any alternative revenue can be found out to augment the resources of the State, and to what extent relief can be given to the ryots.

ಶ್ರೀ ಪಿ. ವೆಂಕಟಗಿರಿಯಪ್ಪ.—"ಆ" ಪ್ರಶ್ನೆಗೆ ಉತ್ತರವಾಗಿ ಹಾಲಿಯಿರುವ ಭೂಕಂದಾಯದ ಪದ್ಧತಿಯ ಬದಲಾವಣೆಯ ಸಾಧ್ಯತೆ ಅಥವಾ ಮತ್ತೇನನ್ನಾದರೂ ಸೂಚಿಸಲು ಮಂತ್ರಿಮಂಡಲದ ಉಪಸಮಿತಿಗೆ ವಹಿಸಿಕೊಡಲಾಗಿದೆಯೆಂದು ಹೇಳಿದ್ದೀರಿ. ಹಿಂದಿನ ಸಭೆಯಲ್ಲಿ ಭೂಕಂದಾಯವನ್ನು ರದ್ದು ಮಾಡುವುದಾಗಿ ಆಶ್ವಾಸನೆ ಕೊಟ್ಟಿದ್ದಿರಿ. ಇಲ್ಲಿನ ಉತ್ತರ ನೋಡಿದರೆ ಮತ್ತೆ ಸರ್ಕಾರದವರು ತಮ್ಮ ನೀತಿಯನ್ನು ಏನಾದರು ಬದಲಾವಣೆ ಮಾಡಬೇಕೆಂದಿದ್ದಾರೆಯೇ ಎಂಬುದನ್ನು ಮಾನ್ಯ ಸಭೆಗೆ ತಿಳಿಸಬೇಕು.

ಶ್ರೀ ಬಿ. ರಾಚಯ್ಯ.—ಹಿಂದಿನ ಬಾಕಿಯನ್ನು ರದ್ದುಗೊಳಿಸುವುದಕ್ಕಾಗುವುದಿಲ್ಲ. ಹಿಂದಿನ ಬಾಕಿಯನ್ನು ವಸೂಲು ಮಾಡಬೇಕಾಗುತ್ತದೆ.

Sri H. SIDDAVEERAPPA.—Has it not been specifically stated in the Press that water rate has been reduced ?

ಶ್ರೀ ಬಿ. ರಾಚಯ್ಯ.—ಕಡಿಮೆ ಮಾಡುವ ವಿಚಾರವನ್ನು ನೋಟಿಫಿಕೇಶನ್‌ನಲ್ಲಿ ಹೇಳಿದ್ದೇವೆ.

Sri H. SIDDAVEERAPPA.—Just now the hon'ble Minister was pleased to say that the matter is under consideration of the Government and that a decision will be taken after the 29th instant. But we have all read in the newspapers that Government decision was taken to reduce the water rate. Which is true ?

ಶ್ರೀ ಬಿ. ರಾಚಯ್ಯ.—ನೋಟಿಫಿಕೇಷನ್ ಹೊರಡಿಸಿದ್ದೇವೆ. ಈಗಿನ ಪರಿಸ್ಥಿತಿಯಲ್ಲಿ ಏನೂ ಹೇಳುವುದಕ್ಕಾಗುವುದಿಲ್ಲ.

Sri H. SIDDAVEERAPPA.—If it is the intention of the Government to reduce the rate by half, what possible objection can the hon'ble Minister expect from the public ? Does he expect them to say that "We do not want it to be reduced" ?

ಶ್ರೀ ಬಿ. ರಾಚಯ್ಯ.—ಅಬ್‌ಜಕ್ಷನ್ ಕಾರ್‌ಫಾರ್ ಮಾಡುವುದಕ್ಕೆ ಗೆಜಿಟ್ಟಿಗೆ ಪಬ್ಲಿಕೇಷನ್ ಕಳುಹಿಸಿದೆ. ಈಗಲೇ ಫೈನಲ್ ಡಿಸಿಷನ್ ಏನು ಅನ್ನುವುದನ್ನು ಹೇಳುವುದಕ್ಕಾಗುವುದಿಲ್ಲ.

Sri H. SIDDAVEERAPPA.—May I know under what provision of law you want the objections to be stated by the people ?

ಶ್ರೀ ಬಿ. ರಾಚಯ್ಯ.—ಕಾನೂನು ಪ್ರಕಾರ ಇಷ್ಟು ದಿವಸಗಳವರೆಗೆ ಜನರಿಗೆ ಅವಕಾಶ ಕೊಡಬೇಕೆಂದು ಇದೆ. ಅದರ ಪ್ರಕಾರ ನೋಟಿಫಿಕೇಷನ್ ಹೊರಡಿಸಿ ಅಬ್‌ಜಕ್ಷನ್ ಕಾರ್‌ಫಾರ್ ಮಾಡಿದ್ದೇವೆ. ಆಮೇಲೆ ಒಂದು ತೀರ್ಮಾನ ತೆಗೆದುಕೊಂಡ ಮೇಲೆ ಜಾರಿಗೆ ಬರುತ್ತದೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ಕಳೆದ ಸಭೆಯಲ್ಲಿ ಭೂಕಂದಾಯ ರದ್ದುಮಾಡುತ್ತೇವೆಂದು ಹೇಳಿರಲಿಲ್ಲವೇ ? ಅದನ್ನು ಈಗೇನಾದರೂ ಬದಲಾವಣೆ ಮಾಡಿದ್ದಾರೆಯೇ ?

Mr. SPEAKER.—No comments. If the supplementay is not short, I will call upon another Member.

ಶ್ರೀ ಪಿ. ವೆಂಕಟಗಿರಿಯಪ್ಪ.—ನಾನು ಕೇಳುವ ಪ್ರಶ್ನೆ ಏನೆಂದರೆ, ಕಳೆದ ಸಭೆಯಲ್ಲಿ ಭೂಕಂದಾಯವನ್ನು ರದ್ದು ಮಾಡುವುದಾಗಿ ಆಶ್ವಾಸನೆ ಕೊಟ್ಟಿದ್ದರು. ಈಗ ಉಪಸಮಿತಿಯನ್ನು ನೇಮಕಮಾಡಿದ್ದೇವೆಂದು ಹೇಳುತ್ತಿದ್ದಾರೆ. ಅಂದರೆ ಭೂ ಕಂದಾಯ ರದ್ದು ಮಾಡುವ ವಿಚಾರದಲ್ಲಿ ಏನಾದರೂ ಬದಲಾವಣೆಯಾಗಿದೆಯೇ ?

Mr. SPEAKER.—It is too long to be remembered ; he may kindly put it in short length.

Sri H. M CHANNABASAPPA.—Will the Government be pleased to state whether Government gave a definite assurance to this House that land revenue would be abolished ?

Sri B. RACHAIAH.—I cannot say at this stage.

ಶ್ರೀ ಪಿ. ವೆಂಕಟಗಿರಿಯಪ್ಪ.—ಭೂಕಂದಾಯ ಪದ್ಧತಿಯನ್ನು ರದ್ದುಮಾಡುವುದಾಗಿ ಈ ಸಭೆಗೆ ತಿಳಿಸಿರುವುದು ಸರಕಾರದ ನೀತಿ ಆಗಿದೆಯೇ ಅಥವಾ ಸರಕಾರ ಅದನ್ನು ಕೈಬಿಟ್ಟಿದ್ದಾರೆಯೇ ?

ಶ್ರೀ ಬಿ. ರಾಚಯ್ಯ.—ಈಗ ಇರತಕ್ಕಂಥ ಪದ್ಧತಿಯನ್ನು ಬದಲಸಿ ಬೇರೆ ರೀತಿಯಾಗಿ ಮಾಡಬೇಕೆಂದು ಸರಕಾರದ ಉದ್ದೇಶವಿದೆ.

ಶ್ರೀ ಸಿ. ಆರ್. ರಂಗೇಗೌಡ.—ಮಾಗಡಿ ತಾಲ್ಲೂಕಿನಲ್ಲಿ ಮಾಡಿರತಕ್ಕಂಥ ರೀ-ಕ್ಲಾಸಿಫಿಕೇಷನ್‌ನಲ್ಲಿ ಲೋಪದೋಷಗಳಿವೆ ಎಂಬುದು ಸರಕಾರದ ಗಮನಕ್ಕೆ ಬಂದಿದೆಯೇ ? ಸ್ಥಳೀಯ ಅಧಿಕಾರಿಗಳಿಂದ ವರದಿ ತರಿಸಿ ರೈತರಿಗೆ ನ್ಯಾಯ ದೊರಕಿಸಿಕೊಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಈಗಿನ ಕಾನೂನು ಪ್ರಕಾರ ಅದಕ್ಕಾಗಿ ರೆವೆನ್ಯೂ ಟ್ರಿಬ್ಯೂನಲ್‌ಗೆ ಹೋಗಬೇಕಾಗುತ್ತದೆ. ಸರಕಾರವು ಅದನ್ನು ಬದಲು ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಎ. ಆರ್. ಬದರಿನಾರಾಯಣ್. —ಲ್ಯಾಂಡ್ ರೆವೆನ್ಯೂ ರದ್ದು ಮಾಡಬೇಕು ಎಂಬ ವಿಚಾರ ಇರುವಾಗ ಎಲ್ಲ ಕಡೆ ಲ್ಯಾಂಡ್ ರೆವೆನ್ಯೂ ಕಲೆಕ್ಟ್ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಹಿಂದಿನ ಹಳ್ಳೇ ಬಾಕಿ ವಸೂಲ್ಮಾಡಬೇಕು. ಅದನ್ನು ರೈತರು ಕೊಡಲೇಬೇಕು. ಈಗ ಇರತಕ್ಕಂಥ ಕಂದಾಯ ಪದ್ಧತಿ ಬದಲಾಯಿಸಬೇಕೆಂದು ಸರಕಾರ ತೀರ್ಮಾನಮಾಡಿದೆ ಎಂದು ಹೇಳಿಕೆ ಕೊಟ್ಟಮೇಲೆ ಅನೇಕರು ತಿಳಿದುಕೊಂಡಿದ್ದೇನೆಂದರೆ ಕಂದಾಯ ರದ್ದಾಗಿದೆ ಕಂದಾಯ ಕೊಡಬೇಡಿ ಎಂದು ಕಂದಾಯ ಕೊಡತಕ್ಕಂಥವರಿಂದ ಕೂಡ ಕೊಡುವುದನ್ನು ನಿಲ್ಲಿಸಿದ್ದಾರೆ. ಆದರೆ ಬಾಕಿ ಇದ್ದುದನ್ನು ಕೊಡಬೇಕಾಗುತ್ತದೆ.

Sri S. SIVAPPA.—The hon'ble Finance Minister during his budget speech has said "I am glad to inform the House that the Government have taken a decision to abolish land revenue in the present form". I want to ask the Revenue Minister whether Government has taken a decision to abolish land revenue and will the Minister state to this House categorically the intention of the Government and how they are going to abolish land revenue ?

Sri B. RACHIAH.—The decision is only to abolish land revenue in the present form.

ಶ್ರೀ ಎ. ಆರ್. ಬದರಿನಾರಾಯಣ್.—ನಮ್ಮ ಜಿಲ್ಲೆಯಲ್ಲಿ ಲ್ಯಾಂಡ್ ರೆವೆನ್ಯೂ ಕಲೆಕ್ಷನ್ ಮಾಡುವುದಕ್ಕೆ ಪ್ರಯತ್ನ ನಡೆಯುತ್ತಿದೆ. ಆದುದರಿಂದ ವಸೂಲ್ಮಾಡಬಾರದು ಎಂದು ಸ್ಪೆಸಿಫಿಕ್ ಇನ್‌ಸ್ಟ್ರಕ್ಷನ್ಸ್ ಕೊಟ್ಟಿದ್ದೀರಾ ?

ಶ್ರೀ ಬಿ. ರಾಚಯ್ಯ.—ಬಾಕಿ ವಸೂಲ್ಮಾಡಬೇಕು ಎಂದು ಇನ್‌ಸ್ಟ್ರಕ್ಷನ್ಸ್ ಕೊಟ್ಟಿದೆ.

Sri S. BANGARAPPA.—What is the financial year from which the land revenue is proposed to be abolished ?

ಶ್ರೀ ಬಿ. ರಾಚಯ್ಯ.—ಈಗ ಹೇಳುವುದಕ್ಕೆ ಬರುವುದಿಲ್ಲ.

Sri C. K. RAJAIAH SHETTY.—Are Government aware that the States of Madras and Bombay are at the verge of abolishing land revenue?

ಶ್ರೀ ಬಿ. ರಾಚಯ್ಯ.—ಅದನ್ನು ಪತ್ರಿಕೆಗಳಲ್ಲಿ ಓದಿದ್ದೇನೆ.

Sri D. PARAMESHWARAPPA.—Hon'ble Minister was pleased to say that the Cabinet sub-committee have revised the water rate and have called for objection. May I know the tentative rates ?

ಶ್ರೀ ಬಿ. ರಾಚಯ್ಯ.—ಅದನ್ನು ಪ್ರಕಟಣೆ ಮಾಡುತ್ತೇವೆ. ಅದರಲ್ಲಿ ಗೊತ್ತಾಗುತ್ತದೆ.

———